ಸಾಕ್ಷಿದಾರನನ್ನು ಕರೆಸಿ ಪ್ರಮಾಣೀಕರಿಸಲಾಯಿತು. ಪ್ರ.ಮಾ.ದಿಃ 14.02.2023.

**ಪಾಟೀ ಸವಾಲು – ಮಾನ್ಯ ಎಜಿಪಿಯವರಿಂದ.**

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಬರೆಯಲು ನಾನೇ ಮಾಹಿತಿಯನ್ನು ಕೊಟ್ಟಿರುತ್ತೇನೆ. ನನ್ನ ಪೋಷಕರು ನನ್ನನ್ನು 1 ನೇ ತರಗತಿಗೆ ಶಾಲೆಗೆ ಸೇರಿಸಿರುತ್ತಾರೆ ಎಂದರೆ ಸರಿ. ಪೋಷಕರು ನೀಡಿದ ಮಾಹಿತಿಯಂತೆ ನನ್ನ ಜನ್ಮ ದಿನಾಂಕವನ್ನು 14.11.2003 ಎಂದು ಶಾಲಾ ದಾಖಲಾತಿಗಳಲ್ಲಿ ನಮೂದಿಸಿರುತ್ತಾರೆ ಎಂದರೆ ಸಾಕ್ಷಿಯು ನನ್ನ ನಿಜವಾದ ಜನ್ಮ ದಿನಾಂಕ 14.01.2003 ಎಂದು ಇದ್ದು, 1 ನೇ ತರಗತಿಗೆ ದಾಖಲಿಸುವ ಸಮಯದಲ್ಲಿ ಅವರು ತಪ್ಪಾಗಿ ನಮೂದಿಸಿರುತ್ತಾರೆ ಎಂದು ಉತ್ತರಿಸುತ್ತಾರೆ. ನಾನು 1 ನೇ ಪ್ರತಿವಾದಿಯ ಶಾಲೆಯಲ್ಲಿ 1 ರಿಂದ 7 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಜಾತಿ ಪ್ರಮಾಣ ಪತ್ರಕ್ಕೆ ಅರ್ಜಿ ಸಲ್ಲಿಸಲು ನಾನು ಶಾಲಾ ದೃಢೀಕರಣ ಪ್ರಮಾಣ ಪತ್ರವನ್ನು ಪಡೆದುಕೊಳ್ಳುತ್ತೇನೆ ಎಂದರೆ ಸರಿ ಸದರಿ ಪ್ರಮಾಣ ಪತ್ರದಲ್ಲಿ ಜನ್ಮ ದಿನಾಂಕ ನಮೂದಿಸಿರುತ್ತಾರೆ ಎಂದರೆ ಸರಿ. ಸದರಿ ದೃಢೀಕರಣ ಪ್ರಮಾಣ ಪತ್ರದಲ್ಲಿ 14.11.2003 ಎಂದು ನಮೂದು ಇರುತ್ತದೆ ಎಂದರೆ ಸರಿ. ಆದರೆ ಅದು ತಪ್ಪಾಗಿ ನಮೂದು ಆಗಿರುತ್ತದೆ. ನನ್ನ ಶಾಲಾ ದಾಖಲೆಗಳಲ್ಲಿ ಸರಿಯಾಗಿ ನನ್ನ ಜನ್ಮ ದಿನಾಂಕ ನಮೂದು ಇದ್ದರೂ ಸಹಿತ ದುರುದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತೀದ್ದೇನೆ ಎಂದರೆ ಸರಿಯಲ್ಲ. ಸರ್ಕಾರಿ ಸೌಲಭ್ಯ ಪಡೆಯುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತೀದ್ದೇನೆ ಎಂದರೆ ಸರಿಯಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ.

ಸಹಿ/–
ದಿವಾಣಿ ನ್ಯಾಯಾಧೀಶರು,
ಬ್ಯಾಡಗಿ.